## ಇನ್ನೂ ಆ ಚಟ ಬಿಟ್ಟಿಲ್ವಾ?

ಅಂದು ಸಂಜೆ ಶೀನಿ ಕಚೇರಿಯಿಂದ ಉದಾಸೀನನಾಗಿ ಬಂದಿದ್ದ. ಆಗ ಆತನ ಪತ್ನಿ 'ಇದ್ಯಾಕೆ ಹುಷಾರಿಲ್ವಾ' ಎಂದಾಗ ಆತ 'ಹಾಗೇನಿಲ್ಲ ಹುಷಾರಾಗಿದ್ದೀನಿ. ಇಂದು ನಮ್ಮ ಕಚೇರಿ ಕಟ್ಟಡ ಬಿದ್ದು ಎಲ್ಲಾರೂ ಸತ್ತು ಹೋದ್ರು' ಎಂದ.



ಆತನ ಪತ್ನಿ ಆಶ್ಚರ್ಯದಿಂದ 'ಮತ್ತೆ ನೀವು ಹೇಗೆ ಉಳಿದ್ರಿ' ಎಂದು ಕೇಳಿದಳು.

'ನಾನು ಆ ಟೈಂನಲ್ಲಿ ಸಿಗರೇಟು ಸೇದಲು ಆಚೆ ಬಂದಿದ್ದೆ' ಎಂದ.

ಕೆಲ ನಿಮಿಷಗಳ ನಂತರ ಟಿವಿ ನ್ಯೂಸ್‌ನಲ್ಲಿ 'ಕಚೇರಿ ಕಟ್ಟಡ ದುರಂತದಲ್ಲಿ ಮಡಿದ ಕುಟುಂಬದವರಿಗೆ ಸರ್ಕಾರ ಒಂದು ಕೋಟಿ ರೂಪಾಯಿ ಕೊಡಲು ತೀರ್ಮಾನಿಸಿದೆ' ಎನ್ನುವುದನ್ನು ನೋಡಿದ ಪತ್ನಿ ಕೋಪದಿಂದ ಗಂಡನತ್ತ ತಿರುಗಿ 'ಥೂ... ಇನ್ನೂ ಆ ಚಟ ಬಿಟ್ಟಿಲ್ವಾ?' ಎನ್ನುತ್ತಾ ಎದ್ದು ಹೋದಳು.

**ಅರವಿಂದ ಜಿ. ಜೋಷಿ**

---



ಕಲೆ: ಗಣೇಶ ಆಚಾರ್ಯ

## ತರಬೇತಿ

ನರ್ಸ್ ತರಬೇತಿ ಮುಗಿಸಿ ತಮ್ಮ ಆಸ್ಪತ್ರೆಯಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ್ದ ಮಧುರಾಳಿಗೆ ಆಸ್ಪತ್ರೆಯ ಮುಖ್ಯಾಧಿಕಾರಿ 'ತರಬೇತಿಯಲ್ಲಿ ಏನೇನು ಕಲಿತಿರುವಿ?' ಎಂದು ಕೇಳಿದರು

'ತುಂಬಾ ಕಲಿತಿದ್ದೇನೆ ಸಾರ್. ವೈದ್ಯರು ಹೇಳಿದಂತೆ ಕೇಳುವುದು, ಆಪರೇಷನ್ ವೇಳೆ ಅವರಿಗೆ ಅಸಿಸ್ಟ್ ಮಾಡುವುದು, ಅವರು ಹೇಳಿದಂತೆ ಗಾಢನಿದ್ರೆಯಲ್ಲಿರುವ ರೋಗಿಯನ್ನು ಎಬ್ಬಿಸಿ ನಿದ್ರೆಮಾತ್ರೆ ನುಂಗಿಸುವುದು...!'

ಆಸ್ಪತ್ರೆಯ ಮುಖ್ಯಾಧಿಕಾರಿ ಆಗಲೇ ತಲೆಯ ಮೇಲೆ ಕೈಹೊತ್ತಿದ್ದರು!.

**ಕೆ. ಆದಿತ್ಯ ಹೆಬ್ಬಾರ್**